"ಕುಟ್ಟಯ್ಯ, ಇದರ ಬೀಗ ಮುರಿದಂತಿದೆ... ಒಂದು ಬಾಗಿಲ ಹಿಡಿಕೆ ನಾಪತ್ತೆಯಾಗಿದೆ... ಬಲವಾದ ಸಲಾಕೆಯಿಂದ ಮೀಟಿದಂತೆ... ಇಲ್ಲೆಲ್ಲಾ ಗೀರುಗಳು... ಓಹ್... ಚಿಲಕ ತುಂಡಾಗಿದೆ... ಯಾರೋ ಬಲಪ್ರಯೋಗ ಮಾಡ್ದ ಹಾಗುಂಟು... ಹೊರಗಡೆ ಕೂಡಾ ಒಂದು ಬಾಗಿಲು ಹೊಸದಾಗಿ ಮಾಡಿಸಿದಂತಿದೆ!... ಇಲ್ಲೇನಾದ್ರೂ ಕಳ್ಳತನ ನಡ್ದಿದೆಯೆ?"

ಒಮ್ಮೆಗೇ ಮುಖ ವಿವರ್ಣವಾದರೂ, ಅದನ್ನು ಮುಚ್ಚುವಂತೆ, ಕುಟ್ಟಯ್ಯ ಪಕಪಕನೆ ನಕ್ಕ. ಆತ ಎಂಜಲು ನುಂಗಿದ್ದನ್ನು ನಾನು ಗಮನಿಸಿದೆ!

"ಕುಡುಕನ ಮನೆಯಲ್ಲಿ ಕದಿವಂತಾಹದು ಏನಿದೆ? ಬಹುಶಃ ಕುಡಿದ ಮತ್ತಿನಲ್ಲಿ ಕೀ ಕಳೆದು ಹಾಕಿ, ಮತ್ತೆ ನನ್ಗೆ ಹೇಳಲು ಹೆದರಿ, ಆಸಾಮಿ ಬೀಗ ಮುರಿದಿರಬೇಕು! ನೋಡಿ, ಇದು ನನ್ಗೆ ಗೊತ್ತೇ ಇರ್ಲಿಲ್ಲ... ಹೊರಗಿನ ಬಾಗಿಲನ್ನು ಇತ್ತೀಚೆಗೆ ನಾನೇ ಬದಲಾಯಿಸಿದ್ದು. ಅದು ಮುರಕಲಾಗಿದ್ದರಿಂದ..." ಹಾಗೆಂದು ಕುಟ್ಟಯ್ಯ ಕಪಾಟಿನ ಕದವ ಪರಿಶೀಲಿಸಿದ.

ಕಪಾಟಿನ ಒಳಗಡೆ ಉಡುಪುಗಳು, ಒಂದಿಷ್ಟು ಮಾತ್ರೆಗಳು, ಲಕೋಟೆಗಳು, ಇನ್ನೇನೋ ಇದ್ದವು. ಕರಮಚಂದ ಅದರಲ್ಲಿ ಕಣ್ಣಾಡಿಸಿ, ಒಂದು ಚಿಕ್ಕ ಕಾಗದದ ತುಂಡೊಂದನ್ನು ತೆಗೆದ. ಅದು ಡಿಪ್ಲೋಮ್ಯಾಟ್ ಬಾರ್ ಅಂಡ್ ರೆಸ್ಟೋರೆಂಟಿನಲ್ಲಿ ಊಟ ಮಾಡಿದ ಬಿಲ್ಲು. ಯಾವುದೋ ಬಳಸದೇ ಉಳಿದ ಮಾತ್ರೆಗಳು... ಕರಮಚಂದ ಅವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಕಪಾಟಿನ ಕದ ಮುಚ್ಚುತ್ತಾ ಮತ್ತೆ ಚಿನ್ನಪ್ಪನಲ್ಲಿ ವಿಚಾರಿಸಿದ,

"ರುದ್ರಮುನಿ ಏಡುಕೊಂಡಲುವಿನ ಷರತ್ತಿನ ಬಗ್ಗೆ ಏನಾದ್ರೂ ಹೇಳಿದ್ನಾ?"

"ಹೇಳಿದ್ದ. ಅದೇನ್ ಮಹಾ ಅಂತ ರುದ್ರಮುನಿ ಒಪ್ಕೊಂಡಿದ್ದನಂತೆ. ಏಡುಕೊಂಡಲು ಮಹಾ ವಾಚಾಳಿ. ಮಾತಾಡೋಕೆ ಶುರು ಮಾಡಿದ್ರೆ ನಿಲ್ಲಿಸ್ತಿರಲಿಲ್ಲ. ಅವನದ್ದೇ ಹಳೆ ಕತೆಗಳು. ಮೊದಮೊದಲು ಏನೂ ಅನ್ನಿಸ್ಲಿಲ್ಲವಾದ್ರೂ ಕೊನೆಕೊನೆಗೆ ಕಿರಿಕಿರಿ ತಡೆಯೋಕೆ ಆಗ್ಲಿಲ್ಲವಂತೆ. ಏಡುಕೊಂಡಲುವಿನದ್ದು ಕಿವಿಹರಿಯೋ ದನಿಯಂತೆ. ಆದ್ರೂ ಬಿಟ್ಟಿ ಬಾಟಲಿಯ ಆಸೆ ರುದ್ರಮುನಿಯನ್ನ ಎಳೀತಿತ್ತು."

"ರುದ್ರಮುನಿ ಅಲ್ಲಿಗೆ ಹೋಗೋದಿಲ್ಲ ಅಂತ ಏನಾದ್ರೂ ಹೇಳಿದ್ದನಾ?"

"ಕಾಣೆಯಾಗೋ ಒಂದು ದಿನದ ಹಿಂದೆಯೂ ಅವ್ನು ಓಡಿ ಹೋಗುವ ವಿಚಾರ ಏನೂ ಮಾತಾಡ್ಲಿಲ್ಲ. ಹಣ ವಸೂಲಿಗೆ ನಲ್ಲತಂಬಿ ಬಂದಾನು ಅಂತ ಹೆದರಿ ಓಡಿಹೋದ್ನೆ? ರುದ್ರಮುನಿಗೆ ಓಡಿ ಹೋಗುವ ಅಗತ್ಯ ಏನೂ ಇರಲಿಲ್ಲ... ವಸೂಲು ಮಾಡಲು ರುದ್ರಮುನಿಯ ಹತ್ರ ಹಣ ಇದ್ದರೆ ತಾನೆ!"

"ಏಡುಕೊಂಡಲುವಿನ ಬಗ್ಗೆ ಇನ್ನೇನಾದ್ರೂ ಹೇಳಿದ್ದನೆ?"

"ವಿಚಿತ್ರ ಮನುಷ್ಯನಂತೆ. ಮಿಲಿಟರಿಯಲ್ಲಿ ಕೆಲ್ಸ ಮಾಡ್ತಿದ್ದನಂತೆ. ಹಾಂ... ಅವ್ನ ಹೆಂಡ್ತಿ ಭಾಳಾ ಚಿಕ್ಕ ವಯಸ್ಸಿನವಳು!... ಒಮ್ಮೆ ಮಾತ್ರ ರುದ್ರಮುನಿ ಆಕೆಯನ್ನು ನೋಡಿದ್ದಂತೆ. ಕುಡೀತಿದ್ದಾಗ, ಎದುರಿನ ಕೋಣೆಯ ಕಿಟಕಿಯಲ್ಲಿ ಆಕೆಯ ಮುಖ ಕಂಡಿತಂತೆ. ಆವಾಗ ಏಡುಕೊಂಡಲು ಟಾಯ್ಲೆಟ್ಟಿಗೆ ಹೋಗಿದ್ದ. ರುದ್ರಮುನಿ ಮೆಲ್ಲನೆ ಎದ್ದು, ಕಾರಿಡಾರಲ್ಲಿ ನಡೆದು, ಆ ಕೊಠಡಿಯ ಹತ್ರ ಹೋದಾಗ, ಆಕೆ ಅಲ್ಲಿಂದ ನಾಪತ್ತೆಯಾಗಿದ್ದಳಂತೆ. ಅಷ್ಟು ಬೇಗ ಆಕೆ ಎಲ್ಲಿ ಹೋದಳು ಅಂತ ಅವ್ನಿಗೆ ಆಶ್ಚರ್ಯ ಆಯ್ತಂತೆ. ಆ ಕೋಣೆಯಿಂದ ಹೊರಗೆ ಬಂದ್ರೆ ಅವ್ನಿಗೆ ಕಾಣಲೇ ಬೇಕಿತ್ತು ಅಂತ ರುದ್ರಮುನಿ ಹೇಳ್ದ. ನನ್ಗೆ ಅನ್ಸುತ್ತೆ ಪಾರ್ಟಿ ಗುಂಡು ಹಾಕಿದ್ದು ಜಾಸ್ತಿಯಾಗಿರ್ಬೇಕು... ಹ್ಹ... ಹ್ಹಾ..."